# ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 797 (922)
2. ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3. ಉತ್ತರಿಸುವ ದಿನಾಂಕ : 27.12.2022
4. ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕೆ.ಐ.ಎ.ಡಿ.ಬಿ. ವತಿಯಿಂದ ಬೆಂಗಳೂರಿನ ವೈಟ್.ಫೀಲ್ಡ್.ನಲ್ಲಿ ಪಾರ್ಕ್ ನಿರ್ಮಾಣಕ್ಕೆಂದು ನಕ್ಷೆಯಲ್ಲಿ ಮೀಸಲಟ್ಟ ಸ್ಥಳವನ್ನು ಕೆ.ಐ.ಎ.ಡಿ.ಬಿ. ಸಂಸ್ಥೆಯು ಮೆ॥ ಹರಿವೇದ ಸಂಸ್ಥೆಗೆ ನಿಯಮಬಾಹಿರವಾಗಿ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪೂರ್ಣ ವಿವರಗಳೊಡನೆ ಮಾಹಿತಿ ನೀಡುವುದು) | ಬೆಂಗಳೂರು ಪೂರ್ವ ತಾಲ್ಲೂಕು, ಹೂಡಿ ಗ್ರಾಮದಲ್ಲಿ ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದಲ್ಲಿ ಪಾರ್ಕ್ ಉದ್ದೇಶಕ್ಕಾಗಿ 22.47 ಎಕರೆ ಜಮೀನನ್ನು ಮೀಸಲಿಡಲಾಗಿತ್ತು. ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದಲ್ಲಿ ನಿವೇಶನಗಳಿಗೆ ಇರುವ ಬೇಡಿಕೆ ಮತ್ತು ಮಂಡಳಿಯ ಹಣಕಾಸು ಪರಿಸ್ಥಿತಿಯನ್ನು ಮನಗಂಡು ಪಾರ್ಕ್ ಉದ್ದೇಶಕ್ಕಾಗಿ ಮೀಸಲಿಟ್ಟಿರುವ 22.47 ಎಕರೆ ಜಮೀನಿನ ಪೈಕಿ 10.85 ಎಕರೆ ವಿಸ್ತೀರ್ಣವನ್ನು ಕೈಗಾರಿಕಾ ನಿವೇಶನಗಳನ್ನಾಗಿ ಪರಿವರ್ತಿಸಿ, 10 ಘಟಕಗಳಿಗೆ ಕೈಗಾರಿಕಾ ಉದ್ದೇಶಗಳಿಗೆ ಹಂಚಿಕೆ ಮಾಡಲಾಗಿದೆ.<br><br>ಉಳಿದ 11.62 ಎಕರೆ ವಿಸ್ತೀರ್ಣದ ಪೈಕಿ 3.95 ಎಕರೆಯನ್ನು 3 ಘಟಕಗಳಿಗೆ ಸಿ.ಎ. ಉದ್ದೇಶಕ್ಕಾಗಿ ಹಂಚಿಕೆ ಮಾಡಲಾಗಿರುತ್ತದೆ.<br><br>ಉಳಿದ 7.67 ಎಕರೆ ಜಮೀನಿನ ಪೈಕಿ 1.82 ಎಕರೆ ನೀರಿನ ಟ್ಯಾಂಕ್ ಪ್ರದೇಶವಾಗಿದ್ದು, 5.85 ಎಕರೆ ಜಮೀನನ್ನು ಸಾರ್ವಜನಿಕ ಸೌಲಭ್ಯಗಳ (ಸಿವಿಕ್ ಅಮೆನಿಟೀಸ್) ಪ್ರದೇಶ ಎಂದು ಕಾಯ್ದಿರಿಸಲಾಗಿದೆ.<br><br>ದಿನಾಂಕ 26.06.2009 ರಂದು ನಡೆದ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಮೆ: ಹರಿವೇದ ಐಟಿ ಪಾರ್ಕ್ ಪ್ರೈ.ಲಿ.ರವರ ಉದ್ದೇಶಿತ ಷಾಪಿಂಗ್ ಮಾಲ್, ಮಲ್ಟಿಪ್ಲೆಕ್ಸ್, ಐಟಿ/ ಐಟಿಇಎಸ್ ಮತ್ತು ಮಲ್ಟಿ ಲೆವಲ್ ಕಾರ್ ಪಾರ್ಕಿಂಗ್ ಯೋಜನೆಗೆ ಇ.ಪಿ.ಐ.ಪಿ. ಕೈಗಾರಿಕಾ ಪ್ರದೇಶದ ಸಿ.ಎ. ನಿವೇಶನದಲ್ಲಿ ಅಂದಿನ ಚಾಲ್ತಿ ಹಂಚಿಕೆ ದರಕ್ಕೆ ಹೆಚ್ಚುವರಿಯಾಗಿ ಶೇಕಡಾ 10ರಷ್ಟು ಪಾವತಿಸಿಕೊಂಡು ಹಂಚಿಕೆ ಮಾಡುವಂತೆ ನಿರ್ಣಯಿಸಲಾಗಿರುತ್ತದೆ.<br><br>ಇ.ಪಿ.ಐ.ಪಿ. ಕೈಗಾರಿಕಾ ಪ್ರದೇಶದಲ್ಲಿ 3-00 ಎಕರೆ ಸಿ.ಎ. ಜಮೀನನ್ನು ಹಂಚಿಕೆ ಮಾಡಲು ದಿನಾಂಕ 25.11.2009ರಂದು ಸರ್ಕಾರದ ಅನುಮೋದನೆ |
| (ಆ) | ಮೆ॥ ಹರಿವೇದ ಸಂಸ್ಥೆಗೆ ಸದರಿ ಪ್ರದೇಶದಲ್ಲಿ ನಿವೇಶನ ಮಂಜೂರಾಗಿ ರದ್ದುಪಡಿಸಲಾಗಿದ್ದು, ತದನಂತರ ಇದೇ ಸಂಸ್ಥೆಗೆ ಪಾರ್ಕ್ | |

| | | |
|---|---|---|
| | ಜಾಗವನ್ನು ಮಂಜೂರು ಮಾಡಲಾಗಿದೆಯೇ; (ಪೂರ್ಣ ವಿವರಗಳೊಡನೆ ಮಾಹಿತಿ ನೀಡುವುದು) | ನೀಡಲಾಗಿದೆ.<br><br>ಮೆ॥ ಹರಿವೇದ ಐಟಿ ಪಾರ್ಕ್ ಪ್ರೈ.ಲಿ. ರವರಿಗೆ ಇ.ಪಿ.ಐ.ಪಿ. ಕೈಗಾರಿಕಾ ಪ್ರದೇಶದ ಸಿ.ಎ. ನಿವೇಶನ ಸಂಖ್ಯೆ 120-ಡಿರಲ್ಲಿ 3-00 ಎಕರೆ ಜಮೀನನ್ನು ಪ್ರತಿ ಎಕರೆಗೆ ರೂ.220/- ಲಕ್ಷಗಳನ್ವಯ ಹಂಚಿಕೆ ಮಾಡಿ, ದಿನಾಂಕ 15.03.2010 ರಂದು ಹಂಚಿಕೆ ಪತ್ರ ನೀಡಲಾಗಿದೆ. |
| (ಇ) | ನಕ್ಷೆಯಲ್ಲಿ ನಮೂದಾಗಿರುವ ಪಾರ್ಕ್ ಜಾಗವನ್ನು ಮಂಜೂರು ಮಾಡುವಾಗ ಸರ್ಕಾರದ ಅನುಮತಿ ಪಡೆಯಲಾಗಿದೆಯೇ; | ಯೋಜನಾ ಪ್ರವರ್ತಕರು ದಿನಾಂಕ 10.09.2010ರ ಒಳಗಾಗಿ ನಿವೇಶನದ ಬಾಕಿ ಹಣವನ್ನು ಪಾವತಿಸಬೇಕಾಗಿದ್ದು, ಪಾವತಿಸಲು ವಿಫಲರಾಗಿದ್ದರ ಮೇರೆಗೆ ಹಂಚಿಕೆಯನ್ನು ದಿನಾಂಕ 28.09.2010 ರಂದು ರದ್ದುಗೊಳಿಸಲಾಗಿದೆ. ಮುಂದುವರೆದು, ಯೋಜನಾ ಪ್ರವರ್ತಕರು ದಿನಾಂಕ 05.04.2011 ರಂದು ನಿಗದಿತ ಬಡ್ಡಿಯೊಂದಿಗೆ ನಿವೇಶನದ ಪೂರ್ಣ ಹಣವನ್ನು ಮಂಡಳಿಗೆ ಪಾವತಿಸಿರುತ್ತಾರೆ. |
| (ಈ) | ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿ ನಿಯಮಬಾಹಿರವಾಗಿ ನಿವೇಶನ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಿನಾಂಕ: 17.01.2019ರಂದು ನಡೆದ ಮಂಡಳಿ ಸಭೆಯಲ್ಲಿ ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದ ಸಿ.ಎ. ನಿವೇಶನ ಸಂಖ್ಯೆ: 120-ಡಿ ರಲ್ಲಿ 3-00 ಎಕರೆ ಜಮೀನನ್ನು ಸಿ.ಎ. ನಿವೇಶನವನ್ನಾಗಿ ಹಾಗೂ ನಲ್ಲೂರಹಳ್ಳಿ ಗ್ರಾಮದ ಸರ್ವೆನಂ: 79ರ 5-00 ಎಕರೆ ಸರ್ಕಾರಿ ಜಮೀನನ್ನು ಪಾರ್ಕ್ ಎಂದು ವಿನ್ಯಾಸ ನಕ್ಷೆಯಲ್ಲಿ ಅಳವಡಿಸುವ ಕುರಿತು ವಿವರವಾಗಿ ಚರ್ಚಿಸಿದ ನಂತರ ಈ ಕೆಳಕಂಡಂತೆ ನಿರ್ಣಯಿಸಿದೆ:- |
| (ಉ) | ಹಾಗಾದರೆ, ನಿಯಮಬಾಹಿರವಾಗಿ ಮಂಜೂರಾತಿ ಮಾಡಿರುವ ಮತ್ತು ಸದನಕ್ಕೆ ತಪ್ಪು ಮಾಹಿತಿ ನೀಡುತ್ತಿರುವ ಅಧಿಕಾರಿಗಳ ಮೇಲೆ ಇದುವರೆವಿಗೂ ಯಾವ ಕ್ರಮ ಕೈಗೊಳ್ಳಲಾಗಿದೆ; | 1. ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಿರುವ ನಲ್ಲೂರಹಳ್ಳಿ ಗ್ರಾಮದ ಸರ್ವೆನಂ. 79ರ 5-00 ಎಕರೆ ಸರ್ಕಾರಿ ಜಮೀನು ಮಂಡಳಿಗೆ ಹಸ್ತಾಂತರಗೊಂಡ ನಂತರ ಈ ಜಮೀನನ್ನು ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದಲ್ಲಿ ಉದ್ಯಾನವನಕ್ಕಾಗಿ (ಪಾರ್ಕ್) ಮೀಸಲಿಡುವುದು;<br><br>2. ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದ ವಿನ್ಯಾಸ ನಕ್ಷೆಯಲ್ಲಿ ಈಗಾಗಲೇ ಹಂಚಿಕೆಯಾಗಿರುವ ಸಂ: 120-ಡಿ ರಲ್ಲಿನ 3-00 ಎಕರೆ ಜಮೀನನ್ನು ಸಿ.ಎ. ನಿವೇಶನವನ್ನಾಗಿ ಚಾಲ್ತಿಯಲ್ಲಿರುವ ಬಡಾವಣೆ ನಕ್ಷೆಗೆ ಸೂಕ್ತ ಮಾರ್ಪಾಡು ಮಾಡುವುದು; |

| | | |
|---|---|---|
| (ಊ) | ಸದರಿ ನಿವೇಶನ ಮಂಜೂರಾತಿಯನ್ನು ರದ್ದುಪಡಿಸಲಾಗಿದೆಯೇ? | 3. ಮೆ: ಹರಿವೇದ ಐಟಿ ಪಾರ್ಕ್ ಪ್ರೈ.ಲಿ. ರವರಿಗೆ ಇ.ಪಿ.ಐ.ಪಿ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ 120-ಡಿ ರಲ್ಲಿ 3-00 ಎಕರೆ ಜಮೀನಿನ ಹಂಚಿಕೆಯನ್ನು ರೆಸ್ಟೋರ್ ಮಾಡಿ ಊರ್ಜಿತಗೊಳಿಸುವುದು;<br><br>ದಿನಾಂಕ: 17.01.2019 ರಂದು ನಡೆದ 359ನೇ ಮಂಡಳಿ ಸಭೆಯ ನಿರ್ಣಯದಂತೆ ಹಾಗೂ ಷರತ್ತುಗಳಿಗೆ ಒಳಪಟ್ಟಂತೆ ಮೆ॥ ಹರಿವೇದ ಐಟಿ ಪಾರ್ಕ್ ಪ್ರೈ.ಲಿ. ರವರಿಗೆ ಮರು ಹಂಚಿಕೆ ಮಾಡಲಾಗಿದೆ.<br><br>ನಲ್ಲೂರಹಳ್ಳಿ ಗ್ರಾಮದ ಸರ್ವೆ ನಂ: 79ರ 5-00 ಎಕರೆ ಸರ್ಕಾರಿ ಜಮೀನನ್ನು ಕೆ.ಐ.ಎ.ಡಿ.ಬಿ.ಗೆ ಹಸ್ತಾಂತರಿಸುವ ಪ್ರಕ್ರಿಯೆ ಪೂರ್ಣಗೊಂಡಿಲ್ಲದೇ ಇರುವುದರಿಂದ ಮೆ: ಹರಿವೇದ ಐಟಿ ಪಾರ್ಕ್ಸ್ ಪ್ರೈ.ಲಿ. ರವರಿಗೆ ಸಿ.ಎ. ನಿವೇಶನ ಸಂಖ್ಯೆ: 120-ಡಿ ರಲ್ಲಿ ಹಂಚಿಕೆ ಮಾಡಿರುವ 3-00 ಎಕರೆ ಜಮೀನಿನ ಹಂಚಿಕೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ದಿನಾಂಕ: 27.09.2019ರ ಪತ್ರದಲ್ಲಿ ಮೆ: ಹರಿವೇದ ಐಟಿ ಪಾರ್ಕ್ ಪ್ರೈ.ಲಿ. ರವರಿಗೆ ತಿಳಿಸಲಾಗಿದೆ.<br><br>ನಲ್ಲೂರಹಳ್ಳಿ ಗ್ರಾಮದ ಸರ್ವೆ ನಂ: 79 ರ 5-00 ಎಕರೆ ಸರ್ಕಾರಿ ಜಮೀನು ಕೆ.ಐ.ಎ.ಡಿ.ಬಿ.ಗೆ ಹಸ್ತಾಂತರವಾಗಲು ಬಾಕಿ ಇದ್ದು, ಈ ಸರ್ಕಾರಿ ಜಮೀನನ್ನು ತುರ್ತಾಗಿ ಕೆ.ಐ.ಎ.ಡಿ.ಬಿ.ಗೆ ಮಂಜೂರು ಮಾಡಿ ಹಸ್ತಾಂತರಿಸುವಂತೆ ಕಂದಾಯ ಇಲಾಖೆಗೆ ಬರೆದ ದಿನಾಂಕ: 13.05.2019, 12.10.2019, 20.06.2020 ಮತ್ತು 20.09.2021ರ ಪತ್ರಗಳಲ್ಲಿ ಕೋರಲಾಗಿದ್ದು, ಇದುವರೆವಿಗೂ ಕೆ.ಐ.ಎ.ಡಿ.ಬಿ.ಗೆ ಮಂಜೂರಾತಿ ಆಗಿರುವುದಿಲ್ಲ. |

ಸಂಖ್ಯೆ: ಸಿಐ 321 ಐಎಪಿ (ಇ) 2022

(ಡಾ॥ ಮುರುಗೇಶ ಆರ್. ನಿರಾಣಿ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು